ಅದು ತಾನಾಗಿ ನಡೆಯಬೇಕು. ನಮ್ಮ ಮನಸ್ಸಿನಿಂದ ಬೆರಳುಗಳಿಗೆ ರವಾನೆಯಾಗುವ ಯಾವೆಲ್ಲ ಭಾವಗಳು, ಹೇಗೆಲ್ಲ ರೂಪ ಪಡೆಯುತ್ತವೆಯೆಂಬುವುದು ಯೋಚಿಸಿ ನಿರ್ಧರಿಸಲು ಬರುವುದಿಲ್ಲ, ಒಂದು ಚಂದ ಚಿತ್ರ ತಾನಾಗಿ ಪಡಿಮೂಡಬೇಕು.'

'ಅದು ಸರಿ ಅಂತಲೇ ಇಟ್ಟುಕೊಳ್ಳೋಣ, ಹಾಗಾದರೆ ನನ್ನ ಕಥೆಯನ್ನು ಅದು ಹೇಗೆ ಇರುವಂತೆಯೇ ಬರೆದಿರಿ? ಆದರೆ, ಆ ಕಥೆಯಲ್ಲಿ ನೀವು ಬರೆದ ಹಾಗೆ ಅವರಿಬ್ಬರೂ ಅಂದರೆ ನಾವಿಬ್ಬರೂ ಕಳ್ಳರಂತೆ ಬೆಳದಿಂಗಳ ರಾತ್ರಿಯಲ್ಲಿ ಕಿಟಕಿಯಲ್ಲಿ ಮುಖವಿಟ್ಟು ಕರೆದು ಕಾವಳದ ಕತ್ತಲಿಗೆ ಸರಿದು ಆತುರದಿಂದ, ಕಾತುರದಿಂದ, ಆವೇಶದಿಂದ, ಹೃದಯವೇ ಬಾಯಿಗೆ ಬಂದಂತೆ, ಪ್ರೇಮದಿಂದ ತಪ್ತರಾಗಿ ಮೈಯೆಲ್ಲ ನಡುಗುತ್ತ, ಜೋರಾಗಿ ಉಸಿರಾಡುತ್ತ, ಜ್ವರವೇರಿದವರಂತೆ ಒಬ್ಬರನ್ನೊಬ್ಬರು ಸಂಧಿಸಿದ್ದಿಲ್ಲ. ಅವರು ಬೆಳಗಿನ ಬೆಳಕಿನಲ್ಲಿ ಬೆಳಕಿನಷ್ಟೇ ಸಹಜವಾಗಿ ಸಂಧಿಸುತ್ತಿದ್ದರು. ಸಂತೆಯೊಳಗಿನ ಗೌಜಿನೊಳಗೂ, ಅವರಿಬ್ಬರದ್ದೇ ಆದ ಏಕಾಂತದಲ್ಲೂ ಅವರು ಬೆಳಕಿನಂತೆ, ಬಯಲಿನಂತೆ ಪರಿಪೂರ್ಣವಾಗಿರುತ್ತಿದ್ದರು.'

ಅವಳ ಮಾತುಗಳನ್ನು ನಾನು ಅನಾಸಕ್ತಿಯಿಂದಲೇ ಕೇಳಿಸಿಕೊಂಡೆ. 'ಇದಕ್ಕಿಂತ ಏನು ಬೇಕು, ಅಲ್ಲಿಗೆ ನಿಮಗೂ ಕಥೆಗೂ ಸಂಬಂಧವಿಲ್ಲ ಅಂತಾಯಿತಲ್ಲ?.'

'ಖಂಡಿತಾ ಇದೆ. ನಮ್ಮ ಊರು, ಕಾಲೇಜು, ನಮ್ಮ ಬದುಕಿನಲ್ಲಿ ನಡೆದ ಕೆಲವು ಘಟನೆಗಳ ಯಥಾವತ್ ಚಿತ್ರ ಇದರಲ್ಲಿದೆ. ಅದು ಹೇಗೆ ಹೀಗೆ ಬರೆಯುವುದಾಯ್ತು ನಿಮ್ಮಿಂದ?' ನನ್ನ ಮುಖ ಸಣ್ಣಗಾಯ್ತು.

ಒಮ್ಮೊಮ್ಮೆ ಹೀಗೆಲ್ಲ ಆಗುವುದಿದೆ. ಹೀಗೇ ಕೆಲವು ನೋಡಿದ ಕೇಳಿದ ಪಾತ್ರಗಳನ್ನು ಕಥೆಯಲ್ಲಿ ತರುವಾಗ ಮೊದಲಿಗೆ ಅವರ ನಿಜವಾದ ಹೆಸರನ್ನೇ ಬಳಸಬೇಕಾಗುತ್ತದೆ. ಇಲ್ಲವಾದರೆ ಪಾತ್ರವನ್ನು ಅವರಂತೆ ಚಿತ್ರಿಸಲು ಆಗುವುದಿಲ್ಲ. ಆಮೇಲೆ ಕಥೆ ಮುಗಿದ ಮೇಲೆ ಹೆಸರನ್ನು ಬದಲಿಸುವ ಕೆಲಸವನ್ನು ಕೂಡ ನಾನು ಮಾಡಿದ್ದೇನೆ. ಒಂದುವೇಳೆ ಈ ಕಥೆಯಲ್ಲಿ ನಾನು ಹಾಗೆ ಮಾಡಿಲ್ಲವೋ? ಆದರೆ ಈ ಇವಳ ಕಥೆಯನ್ನು ಎಲ್ಲಿ ಕೇಳಿದ್ದೆ? ಯಥಾವತ್ ಕಥೆ ಅಂತ ಬೇರೆ ಅನ್ನುತ್ತಿದ್ದಾಳಲ್ಲ.

ನನ್ನ ಎದೆ ಅರೆಕ್ಷಣ ಝಲ್ಲೆಂದಿತು. ಇದು ರಾಜೀವ ಹೇಳಿದ ಕಥೆ. ತಮಿಳುನಾಡಿನಲ್ಲಿ ನಾವು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿದ್ದಾಗ, ಮರೀನಾ ಕಡಲಿನ ದಂಡೆಯಲ್ಲಿ ಕುಳಿತು ಹೇಳಿದ ಕಥೆ. ತಮಿಳುನಾಡಿನ ಯಾವುದೋ ಮೂಲೆಯಲ್ಲಿ, ಎಲ್ಲೋ ಮಧುರೆಯಲ್ಲೋ ಕಾಂಚೀಪುರಂನಲ್ಲೋ ನಡೆದ ಸಂಗತಿ. ಎಷ್ಟೋ ವರ್ಷಗಳ ಹಿಂದೆ ಕೇಳಿದ್ದು, ಅದೂ ತಮಿಳುನಾಡಿನಲ್ಲಿ! ಅದನ್ನು ಇಲ್ಲಿ ಕನ್ನಡದಲ್ಲಿ ಬರೆದಾಗ ಯಾರೋ ಹುಡುಕಿಕೊಂಡು ಬರುತ್ತಾರೆಂದರೆ ಏನೆನ್ನಬೇಕು! ಥತ್...

'ಸರ್ ಏನು ಯೋಚಿಸ್ತಾ ಇದ್ದೀರಿ ? ಯಾರು ಕಥೆ ಹೇಳಿದರಪ್ಪ ಇವರದ್ದು ಅಂತಲಾ?'

'ನೋಡಿ ಮೇಡಂ, ಮೊದಲಿಗೆ ಒಂದ್ವಿಚಾರ, ನಾವು ಎಲ್ಲಿಂದಲೋ ಆಕಾಶದಿಂದ ಉದುರುವ ಅದೇನನ್ನೋ ಹಿಡಕೊಂಡು ಕಥೆ ಬರೆಯೋಕ್ಕಾಗಲ್ಲ. ಎಲ್ಲ ನಮ್ಮ ಬದುಕಿಂದ, ನಮ್ಮ ಜಗತ್ತಿನಲ್ಲಿ ನಮ್ಮ ಸುತ್ತಮುತ್ತ ನಡೆಯುವ ವಿಚಾರಗಳಿಂದಲೇ ಎತ್ತಿಕೊಂಡು ಬರೆಯಬೇಕು. ಒಂದು ವಿಚಾರ ನಮ್ಮನ್ನ ಹೇಗೆ ಪ್ರಭಾವಿಸತ್ತೆ, ನಾವು ಅದಕ್ಕೆ ಹೇಗೆ ಸ್ಪಂದಿಸ್ತೀವಿ, ಅದನ್ನ ಹೇಗೆ ನೋಡ್ತೀವಿ, ಹ್ಯಾಗೆ ತಗೋತೀವಿ, ಈ ಎಲ್ಲವೂ ಒಂದು ಕಥೆಯ ಬೆಳವಣಿಗೆಯಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೆಲಸ ಮಾಡೇ ಮಾಡ್ತವೆ, ಎಲ್ಲೋ ಕೇಳಿದ್ದು, ಎಲ್ಲೋ ನೋಡಿದ್ದು, ಯಾರೋ ಹೇಳಿದ್ದು ಇವೆಲ್ಲ ಎದೆಯೊಳಗೆ ಎಲ್ಲೆಲ್ಲೋ ಅಡಗಿ ಕುಳಿತುಕೊಂಡು ಹೊಂಚುಹಾಕಿ ಕಥೆಗಾರನನ್ನು ಬಲಿಗೆಡವಿ ವಿಜಯ ಸಾಧಿಸ್ತವೆ. ಇದು ಕೂಡ ಹಾಗೆಯೇ, ನಾನು ಬರೆದ ಕಥೆ ನಿಮಗೆ ಯಾವುದೋ ಒಂದ್ರೀತಿಯಲ್ಲಿ ಕನೆಕ್ಟ್ ಆಗಿದೆ ಅಷ್ಟೇ, ಹೀಗೆ ಬಹಳಷ್ಟು ಜನ ಓದುಗರಿದ್ದಾರೆ. ಎಲ್ಲೋ ನಂದೇ ಕಥೆ ಬರೆದಿದ್ದೀರಾ ಅನ್ಸುತ್ತೆ ಸರ್, ನಾಯಕಿಯ ನೋವು ನನ್ನ ನೋವೂ ಯಾವ ರೀತಿಲೂ ಬೇರೆಯಲ್ಲ ಅಂತ ಎಷ್ಟೋ ಜನ ಪತ್ರ ಬರೆದು, ಫೋನ್ ಮಾಡಿ ಮಾತಾಡಿದ್ದಾರೆ. ನಂಗನಿಸುತ್ತೆ ನೀವು ಸುಮ್ಮನೆ ವಿಷಯವನ್ನ ಕಾಂಪ್ಲಿಕೇಟ್ ಮಾಡ್ತಾ ಇದ್ದೀರಿ ಅಂತ' ನನ್ನನ್ನು ನಾನು ಹೇಗೆ ಡಿಫೆಂಡ್ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ನನಗೆ ಗೊಂದಲವುಂಟಾಯ್ತು. ಆದರೆ ಬೇರೆ ದಾರಿ ಕಾಣಲಿಲ್ಲ.

'ನೋಡಿ ಸರ್, ಇದರಲ್ಲಿ ವೃಥಾ ಚರ್ಚೆಯೆಲ್ಲ ಏನಿಲ್ಲ, ನನಗೆ ಹೇಳಬೇಕಿರುವುದು ಇಷ್ಟೇ, ನೀವು